ಮರಗಳ, ಅಂಟು ಮರಗಳ ಭೀಭತ್ಸ ಧ್ವನಿಯಿಂದ ತುಂಬಿ ಹೋದ ಅದು ನಿಜಕ್ಕೂ ಉಷ್ಣವಲಯದ ಕಾಡೇ ಸರಿ.

ತನ್ನ ದುರ್ಬೀನಿನ ಮೂಲಕ ಆತ ಮರಗಳನ್ನು ಮಾತ್ರವಲ್ಲದೆ, ಬಾಳೆಯ ಅಗಲವಾದ ಎಲೆಗಳನ್ನು ಕೂಡ ನೋಡಬಹುದಿತ್ತು. ಅಲ್ಲದೆ, ಏಕಕಾಲಕ್ಕೆ ಆಕಾಶಕ್ಕೆ ನೆಗೆದು ಕಾಮನಬಿಲ್ಲಿನ ಹಾಗೆ ತೋರುವ ಅಸಂಖ್ಯ ಕೋತಿಗಳನ್ನು, ದೊಡ್ಡ ದೊಡ್ಡ ಕೊಕ್ಕರೆಗಳನ್ನು, ಗಿಳಿಗಳ ಹಿಂಡನ್ನು ಅಲ್ಲಿ ಕಾಣಬಹುದಿತ್ತು. ಸ್ಕಾವಿನ್‌ಸ್ಕಿಗೆ ಇಂಥ ಕಾಡುಗಳ ಪರಿಚಯವಿತ್ತು. ಒಮ್ಮೆ ಅಮೇಜಾನ ನದಿಯಲ್ಲಿ ದೋಣಿ ದುರಂತಕ್ಕೀಡಾದಾಗ, ಎಷ್ಟೋ ವಾರಗಳ ಕಾಲ ಆತ ಅಂಥ ನಿಬಿಡ ಕಾಡಿನಲ್ಲೇ ಅಲೆದಾಡಿದ್ದ. ಆ ಅದ್ಭುತವಾದ ದೃಶ್ಯದ ಅಡಿಯಲ್ಲಿ ಅದೆಷ್ಟು ಬಗೆಯ ಅಪಾಯ ಹಾಗೂ ಸಾವಿನ ಭಯ ಹುದುಗಿರುತ್ತಿತ್ತು ಎಂಬುದನ್ನು ಆತ ಕಂಡಿದ್ದ. ಆ ಭಯಾನಕ ರಾತ್ರಿಗಳಲ್ಲಿ ಚೀತ್ಕರಿಸುವ ಮಂಗಗಳ ಭೀಭತ್ಸ ದನಿಯನ್ನು, ಹುಲಿಗಳ ಗರ್ಜನೆಯನ್ನು ಆತ ಕೇಳಿದ್ದ. ಲಿಯಾನ್ ಬಳ್ಳಿಯ ಹಾಗೆ ಮರಗಳನ್ನು ಸುತ್ತಿಕೊಂಡ ದೈತ್ಯಾಕಾರದ ಹಾವುಗಳನ್ನು ನೋಡಿದ್ದ. ಸಳಸಳ ಸುತ್ತುವ ಮೊಸಳೆಗಳು ಹಾಗೂ ಟೋರ್ಪೆಡೋ ಮೀನುಗಳಿಂದ ತುಂಬಿ ತೂಕಡಿಸುವ ಕಾಡಿನ ಸರೋವರಗಳ ಬಗ್ಗೆ ಆತ ತಿಳಿದುಕೊಂಡಿದ್ದ. ಅದುವರೆಗೆ ಯಾರೂ ನೋಡಿರದ ಆ ಭೀಕರ ಕಾಡಿನಲ್ಲಿ ಮನುಷ್ಯ ಹೇಗೆ ಬದುಕಿರುವನೊ! ಮನುಷ್ಯನಿಗಿಂತ ಹತ್ತುಪಟ್ಟು ದೊಡ್ಡ ಗಾತ್ರದ ಎಲೆಗಳಿರುವ ಕಾಡು ಅದು. ರಕ್ತ ಹೀರುವ ಸೊಳ್ಳೆಗಳಿಂದ, ಇಂಬಳಗಳಿಂದ, ದೈತ್ಯಾಕಾರದ ವಿಷಕಾರಿ ಜೇಡದ ಹುಳಗಳಿಂದ ಗಿಜುಗುಟ್ಟುವ ಆ ಕಾಡಿನ ಬಗ್ಗೆ ಅವನಿಗೆಲ್ಲ ಗೊತ್ತಿತ್ತು. ಅಂಥ ಆ ಕಾಡುಜೀವನವನ್ನು ಆತ ಅನುಭವಿಸಿದ್ದ. ತನ್ಮೂಲಕವೇ ಸಾಗಿ ಬಂದಿದ್ದ. ತಾನೇ, ಅದಕ್ಕೆ ಸಾಕ್ಷಿಯಾಗಿದ್ದ. ಇದೀಗ ಆ ಎತ್ತರದಿಂದ ಅದರ ಚೆಲುವನ್ನೆಲ್ಲ ಆರಾಧಿಸುತ್ತ, ಅದರ ಮೋಸಗಾರಿಕೆಯ ಬಗ್ಗೆ ಎಚ್ಚರವಹಿಸುತ್ತ, ಆ ರೀತಿ ಎಲ್ಲವನ್ನು ನೋಡುತ್ತ ಆತ ಸಂತಸಪಡುತ್ತಿದ್ದ. ಆ ಗೋಪುರ ಎಲ್ಲ ಬಗೆಯ ಅಪಾಯಗಳಿಂದ ಆತನಿಗೆ ರಕ್ಷಣೆ ನೀಡಿತ್ತು. ರವಿವಾರ ದಿನ ಕೆಲವು ಗಂಟೆಗಳಷ್ಟು ಮಾತ್ರ ಅದನ್ನು ತೊರೆಯುತ್ತಿದ್ದ. ಬೆಳ್ಳಿಯ ಗುಂಡಿಗಳಿರುವ ಸಂಚಾಲಕನ ನೀಲಿ ಕೋಟನ್ನು ಆದಿನ ಆತ ಧರಿಸುತ್ತಿದ್ದ. ತನಗೆ ದೊರೆತ ಎಲ್ಲ ಪದಕಗಳನ್ನು ಎದೆಯ ಮೇಲೆ ಜೋತುಬಿಟ್ಟುಕೊಳ್ಳುತ್ತಿದ್ದ. ಆತ ಚರ್ಚನ್ನು ಪ್ರವೇಶಿಸುತ್ತಿದ್ದಂತೆ, "ಇಲ್ಲೊಬ್ಬ ಗೌರವಾನ್ವಿತ ದೀಪಗೃಹದ ಸಂಚಾಲಕ ನಮ್ಮೊಡನಿದ್ದಾನೆ. ಅಮೆರಿಕನವನಾಗಿದ್ದರೂ ಮಡಿವಂತಿಕೆ ಅವನಲ್ಲಿಲ್ಲ" ಎಂದು ಸ್ಥಳೀಯರು ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಅದನ್ನು ಆಲಿಸುತ್ತಿದ್ದಂತೆ, ಹಾಲಿನಂತೆ ಬೆಳ್ಳಗಿದ್ದ ಆತನ ತಲೆ ಅಭಿಮಾನದಿಂದ ಬೀಗುತ್ತಿತ್ತು. ಆದರೆ, ದಿವ್ಯಾರಾಧನೆ ಮುಗಿದ ನಂತರ ಆತ ನೇರವಾಗಿ ತನ್ನ ದ್ವೀಪಕ್ಕೆ ಮರಳುತ್ತಿದ್ದ. ಏಕೆಂದರೆ, ಆ ಪ್ರದೇಶದ ಬಗ್ಗೆ ಅವನ ವಿಶ್ವಾಸ ಇನ್ನೂ ಗಟ್ಟಿಕೊಂಡಿರಲಿಲ್ಲ. ರವಿವಾರ ಕೂಡ ಆತ ಪಟ್ಟಣದಿಂದ ತಂದ ಸ್ಪೇನ್ ದೇಶದ ಸುದ್ದಿ ಪತ್ರಿಕೆಯನ್ನೇ ಓದುತ್ತಿದ್ದ. ಇಲ್ಲವೆ, ಫಾಲ್ಕನ್‌ಬ್ರಿಡ್ಜ್‌ನಿಂದ ನ್ಯೂಯಾರ್ಕ ಹೆರಾಲ್ಡ್ ಪತ್ರಿಕೆಯನ್ನು ಕಡತಂದು ಕುತೂಹಲದಿಂದ ಯುರೋಪಿನ ಸುದ್ದಿಗಳನ್ನು ಓದಿ ತಿಳಿದುಕೊಳ್ಳುತ್ತಿದ್ದ. ಮತ್ತೊಂದು ಭೂಖಂಡದಲ್ಲಿ ಸ್ಥಿತವಾದ ಆ ದೀಪಗೃಹದ ಮೇಲಿದ್ದ ಮುದಿ ಹೃದಯ ತನ್ನ ತಾಯ್ನಾಡಿನ ಬಗ್ಗೆ ಇನ್ನೂ ಮಿಡಿಯುತ್ತಲೇ ಇತ್ತು. ಕೆಲವು ಸಲ ದೋಣಿ ಆತನ ನಿತ್ಯದ ಸಾಮಾನುಗಳನ್ನು ಹಾಗೂ ನೀರನ್ನು ಆ ದ್ವೀಪಕ್ಕೆ ತರುವಾಗ, ಆತ ಗೋಪುರದಿಂದ ಕೆಳಗಿಳಿದು ದೋಣಿಯ ಕಾವಲುಗಾರ ಜಾನ್ಸ್‌ನ ಜೊತೆ ಮಾತಾಡಲು ಹೋಗುತ್ತಿದ್ದ. ಹಾಗೆ ಮಾಡಿದಕ್ಕೆ ಸಂಕೋಚಪಟ್ಟುಕೊಂಡಿದ್ದ. ಆತ ಪಟ್ಟಣಕ್ಕೆ ಹೋಗಿ ಪತ್ರಿಕೆ ಓದುವುದನ್ನೇ ನಿಲ್ಲಿಸಿದ.